**1 ನೇ ಹೆಚ್ಚುವರಿ ವಿಶೇಷ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಚಿಕ್ಕಮಗಳೂರು**

<u>ಸ್ಪೆಷಲ್ ಮೊಕದ್ದಮೆ ನಂಃ 24/2022</u>

| | | |
|---|---|---|
| ಸಾಕ್ಷಿದಾರರ ಹೆಸರು | - ಶಾಂತಪ್ಪ | ಪಿಡಬ್ಲೂ -2 |
| ತಂದೆಯ ಹೆಸರು | - ರಾಜು | ಸಿಡಬ್ಲೂ -1 |
| ವಯಸ್ಸು | - 65 ವರ್ಷ | |
| ಉದ್ಯೋಗ | - ಕೂಲಿ ಕೆಲಸ | |
| ವಾಸ ಸ್ಥಳ | - ಬಿದರಹಳ್ಳಿ | |

*(ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆತನನ್ನು ಈ ದಿನ jitsi app ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು.)*

ದಿನಾಂಕಃ 04.07.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-</u>

1. ಆರೋಪಿ ಮನು ಗೊತ್ತು, ಆತ ನನ್ನ ಮಗನನ್ನು ಕಬ್ಬಿನಹಳ್ಳಿ ಎಸ್ಟೇಟಿಗೆ ಕೆಲಸಕ್ಕೆ ಕರೆದುಕೊಂಡು ಹೋಗಿದ್ದನು. ಮೃತ ಶೇಷಪ್ಪ ನನ್ನ ಮಗ. ಚಾಸಾ.7 ನನ್ನ ಹೆಂಡತಿ. ಚಾಸಾ.10 ಮತ್ತು ಚಾಸಾ.14 ಗೊತ್ತು. ಚಾಸಾ.15 ಮತ್ತು ಚಾಸಾ.16 ರವರು ಗೊತ್ತಿಲ್ಲ.

2. ನಾನು ಹಾನುಬಾಳುವಿನಲ್ಲಿರುವ ಎಸ್ಟೇಟ್ ಒಂದರಲ್ಲಿ ಕೆಲಸ ಮಾಡಿಕೊಂಡಿದ್ದೆನು. ಆ ಸಮಯದಲ್ಲಿ ನಾನು ಸದರಿ ಎಸ್ಟೇಟಿನ ಕೂಲಿ ಲೈನ್ ಮನೆಯಲ್ಲಿ ವಾಸಿಸುತ್ತಿದ್ದೆನು. ಸದರಿ ಮನೆಯಲ್ಲಿ ನಾನು, ನನ್ನ ಹೆಂಡತಿಯಾದ ಚಾಸಾ.7 ಮತ್ತು ನನ್ನ ಹಿರಿಯ ಮಗನಾದ ಶೇಷಪ್ಪ ವಾಸವಾಗಿದ್ದೆವು. ಆ ಸಮಯದಲ್ಲಿ ನನ್ನ ಮಗ ಶೇಷಪ್ಪ ಸಹ ಸದರಿ ಎಸ್ಟೇಟಿನಲ್ಲಿ ನನ್ನೊಂದಿಗೆ ಕೆಲಸಕ್ಕೆ ಬರುತ್ತಿದ್ದನು. ನಂತರ ಶೇಷಪ್ಪ ತನ್ನನ್ನು ಆರೋಪಿ ಕಬ್ಬಿನಹಳ್ಳಿ ಎಸ್ಟೇಟಿಗೆ

ಕರೆದುಕೊಂಡು ಹೋಗಿ ಕೆಲಸಕ್ಕೆ ಸೇರಿಸಿರುವುದಾಗಿ ತಿಳಿಸಿದನು. ಈಗ್ಗೆ 3 ವರ್ಷಗಳ ಹಿಂದೆ ನನ್ನ ಮಗ ಶೇಷಪ್ಪ ನನಗೆ ಫೋನ್ ಮಾಡಿ ಆ ರೀತಿ ಆರೋಪಿ ಆತನನ್ನು ಕಬ್ಬಿನಹಳ್ಳಿ ಎಸ್ಟೇಟಿಗೆ ಕೆಲಸಕ್ಕೆ ಸೇರಿಸಿರುವುದಾಗಿ ಹೇಳಿದ್ದನು. ಆ ಸಮಯದಲ್ಲಿ ಸದರಿ ಎಸ್ಟೇಟಿನಲ್ಲಿರುವ ಕೂಲಿ ಲೈನ್ ಮನೆಗಳ ಪೈಕಿ ಒಂದೇ ಮನೆಯಲ್ಲಿ ತಾನು ಮತ್ತು ಆರೋಪಿ ವಾಸವಿರುವುದಾಗಿ ನನ್ನ ಮಗ ನನಗೆ ತಿಳಿಸಿದ್ದನು.

3. ಅದಾದ 1 ತಿಂಗಳಿಗೆ ಕಬ್ಬಿನಹಳ್ಳಿ ಎಸ್ಟೇಟಿನ ಮಾಲೀಕರು ನನಗೆ ಫೋನ್ ಮಾಡಿ ನಿಮ್ಮ ಮಗ ಶೇಷಪ್ಪನಿಗೆ ಹುಷಾರಿಲ್ಲ ನೀವು ಬರಬೇಕು ಎಂದು ಹೇಳಿದರು. ಆ ರೀತಿ ಅವರು ಫೋನ್ ಮಾಡಿದಾಗ ಸಮಯ ರಾತ್ರಿ 9.00 ಗಂಟೆಯಾಗಿತ್ತು. ಹಾಗಾಗಿ ನಾನು ಮಾರನೇ ದಿನ ಬೆಳಿಗ್ಗೆ 9.00 ಗಂಟೆಗೆ ಚಿಕ್ಕಮಗಳೂರಿನ ಸರ್ಕಾರಿ ಆಸ್ಪತ್ರೆಗೆ ಹೋಗಿ ನೋಡಿದೆನು. ಆ ಸಮಯದಲ್ಲಿ ನನ್ನೊಂದಿಗೆ ನನ್ನ ಹೆಂಡತಿ, ನನ್ನ ಮಗಳು, ನನ್ನ ತಮ್ಮ ಮತ್ತು ನನ್ನ ತಮ್ಮನ ಮಗ ಬಂದಿದ್ದರು. ನಾವು ಅಲ್ಲಿಗೆ ಹೋಗಿ ನೋಡುವಷ್ಟರಲ್ಲಿ ನನ್ನ ಮಗ ಶೇಷಪ್ಪ ಮೃತಪಟ್ಟಿದ್ದನು. ನಾನು ನನ್ನ ಮಗನ ಶವವನ್ನು ನೋಡಿದಾಗ ಆತನ ಕುತ್ತಿಗೆ, ಹೊಟ್ಟೆ, ಎರಡೂ ಕೆನ್ನೆಯ ಬಳಿ ಕತ್ತಿಯಿಂದ ಕಡಿದಿರುವುದು ಕಂಡು ಬಂತು. ನಂತರ ನಾವೆಲ್ಲರೂ ಚಿಕ್ಕಮಗಳೂರು ಪೊಲೀಸ್ ಠಾಣೆಗೆ ಹೋಗಿ ಆರೋಪಿಯ ವಿರುದ್ಧ ದೂರನ್ನು ಕೊಟ್ಟೆನು. ಸದರಿ ದೂರಿಗೆ ನನ್ನ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತೇನೆ. ಸದರಿ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ.6 ಎಂದು ಗುರುತಿಸಲಾಯಿತು.

4. ದೂರು ನೀಡಿದ ಎರಡು ತಿಂಗಳ ಬಳಿಕ ಪೊಲೀಸರು ನನಗೆ ಫೋನ್ ಮಾಡಿ ಠಾಣೆಗೆ ಕರೆಸಿದ್ದರು. ಆ ದಿನ ಪೊಲೀಸರು ಆರೋಪಿಯನ್ನು ನನಗೆ ತೋರಿಸಿ ಆತನೇ ನನ್ನ ಮಗ ಶೇಷಪ್ಪನನ್ನು ಕೊಲೆ ಮಾಡಿರುವುದಾಗಿ ತಿಳಿಸಿದರು. ಅದಕ್ಕೂ ಮೊದಲು ದೂರು ನೀಡಿದ ಬಳಿಕ ಆರೋಪಿ ಠಾಣೆಯಲ್ಲಿ ಇದ್ದನು, ಆಗ ಪೊಲೀಸರು ಆತನನ್ನು ಮತ್ತು ಆತನ ಫೋಟೋವನ್ನು ನಮಗೆ ತೋರಿಸಿ ಆತನೇ ಅಲ್ಲವೇ ಎಂದು ಕೇಳಿದ್ದರು.

5. ಕಬ್ಬಿನಹಳ್ಳಿ ಎಸ್ಟೇಟಿನ ಮಾಲೀಕರು ಆರೋಪಿ ಮತ್ತು ನನ್ನ ಮಗ ಒಟ್ಟಿಗೆ ಕೆಲಸಕ್ಕೆ ಬರುತ್ತಿದ್ದರು ಮತ್ತು ಒಂದೇ ಮನೆಯಲ್ಲಿ ವಾಸವಾಗಿದ್ದರು ಆದರೆ ಬುಧವಾರದಂದು ಅವರು ಕೆಲಸಕ್ಕೆ ಹೋಗದೇ ಇದ್ದಾಗ ತಾನು ಅವರು ವಾಸವಿದ್ದ ಕೂಲಿ ಲೈನ್ ಮನೆಗೆ ಸಂಜೆ 5.00 ಗಂಟೆ ಸುಮಾರಿಗೆ ಹೋಗಿ ನೋಡಿದಾಗ ಮನೆಯ ಬಾಗಿಲು ತೆಗೆದಿದ್ದಾಗಿ, ನಂತರ ಅವರು ಮನೆಯ ಒಳಗೆ ಟಾರ್ಚ್ ಬಿಟ್ಟು ನೋಡಿದಾಗ ನನ್ನ ಮಗ ಶೇಷಪ್ಪ ಮಲಗಿದ್ದ ರೀತಿ ಕಂಡು ಬಂದಿದ್ದಾಗಿ ಮತ್ತು ಆತನ ಸುತ್ತ ರಕ್ತ ಹರಿದಿದ್ದು ಕಂಡು ಬಂದಿದ್ದಾಗಿ ನಂತರ ಅವರು ರಾತ್ರಿ 9.00 ಗಂಟೆಗೆ ನನಗೆ ಫೋನ್ ಮಾಡಿ ವಿಷಯವನ್ನು ತಿಳಿಸಿದ್ದಾಗಿ ತಿಳಿಸಿದರು.

6. ಆಸ್ಪತ್ರೆಯಲ್ಲಿ ಪೊಲೀಸರು ನನ್ನ ಮಗನ ಶವವನ್ನು ತೋರಿಸಿ ಆತ ನಿಮ್ಮ ಮಗನೇ ಎಂದು ಕೇಳಿದರು. ಆಗ ನಾನು ಹೌದು ಎಂದು ಹೇಳಿದೆನು. ನಂತರ ಪೋಸ್ಟ್ ಮಾರ್ಟಮ್ ಮಾಡಿಸಿದ ಬಳಿಕ ನನ್ನ ಮಗನ ಶವವನ್ನು ಪೊಲೀಸರು ನನಗೆ ಕೊಟ್ಟರು. ಆ ಸಮಯದಲ್ಲಿ ಪೊಲೀಸರು ನನ್ನ ಸಹಿಯನ್ನು ಪಡೆದುಕೊಂಡರು. ನಂತರ ನನ್ನ ಮಗನ ಶವವನ್ನು ದಫನ್ ಮಾಡಿದೆವು.

7. ಸಾಕ್ಷಿಯು ಹಣ ಸಂದಾಯ ರಶೀದಿಯಲ್ಲಿರುವ ತನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ರಶೀದಿಯನ್ನು ನಿಪಿ.8 ಎಂದು ಗುರುತಿಸಲಾಯಿತು.

8. ಸಾಕ್ಷಿಗೆ ಎರಡು ಫೋಟೋಗಳನ್ನು ತೋರಿಸಲಾಗಿ ಅವುಗಳಲ್ಲಿ ಕಂಡು ಬರುವ ಶವ ನನ್ನ ಮಗ ಶೇಷಪ್ಪನದ್ದು ಎಂದು ನುಡಿರುತ್ತಾರೆ. ಸದರಿ ಫೋಟೋಗಳನ್ನು ನಿಪಿ.9 ಮತ್ತು ನಿಪಿ.10 ಎಂದು ಗುರುತಿಸಲಾಯಿತು.

9. ಪೊಲೀಸ್ ಠಾಣೆಯಲ್ಲಿ ಪೊಲೀಸರು ಒಂದು ಕತ್ತಿ ಮತ್ತು ಚಾಕುವನ್ನು ತೋರಿಸಿ ಅದರಿಂದ ಆರೋಪಿ ನನ್ನ ಮಗನನ್ನು ಕಡಿದಿದ್ದಾಗಿ ತಿಳಿಸಿದ್ದರು. ಸದರಿ ಕತ್ತಿ ಮತ್ತು ಚಾಕುವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಒಂದು ಕತ್ತಿ ಮತ್ತು ಚಾಕುವನ್ನು ಮು.ಮಾ.8 ಮತ್ತು ಮು.ಮಾ.9 ಎಂದು ಗುರುತಿಸಲಾಯಿತು.

(ಈ ದಿನ ಮುದ್ದೆ ಮಾಲು 8 ಮತ್ತು 9 ಎಂದು ಗುರುತಿಸಲ್ಪಟ್ಟ ವಸ್ತುಗಳನ್ನು ಪ್ಯಾಕ್ ಮಾಡಿ ಎಫ್ ಎಸ್ ಎಲ್ ಸೀಲು ಮಾಡಲಾಗಿದ್ದು, ಅವುಗಳನ್ನು ಈ ದಿನ ತೆರೆದ ನ್ಯಾಯಾಲಯದಲ್ಲಿ ಆರೋಪಿ, ಆತನ ಪರ ವಕೀಲರು ಮತ್ತು ವಿಶೇಷ ಸರ್ಕಾರಿ ಅಭಿಯೋಜಕರ ಸಮಕ್ಷಮ ತೆರೆದು ಸಾಕ್ಷಿಗೆ ತೋರಿಸಲಾಗಿರುತ್ತದೆ.)

10. ನಂತರ ಪೊಲೀಸರು ಠಾಣೆಗೆ ಬರುವಂತೆ ನನ್ನನ್ನು ಕರೆಯುತ್ತಿದ್ದರು, ಆದರೆ ನನಗೆ ಹೋಗಲು ಆಗಲಿಲ್ಲ ಕಾರಣ ನನ್ನ ಆರೋಗ್ಯ ಸರಿ ಇರಲಿಲ್ಲ. ಆರೋಪಿ ನನ್ನ ಮಗನಿಗೆ ಯಾವ ಕಾರಣಕ್ಕೆ ಹೊಡೆದು ಕೊಲೆ ಮಾಡಿದ್ದನು ಎಂದು ನನಗೆ ಗೊತ್ತಾಗಲಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-</u>

11. ದಿನಾಂಕ 17.11.2021 ರಂದು ಬುಧವಾರ ಆರೋಪಿ ಮತ್ತು ನನ್ನ ಮಗ ಶೇಷಪ್ಪ ಸಂತೆ ಸಾಮಾನುಗಳನ್ನು ತೆಗೆದುಕೊಂಡು ಬಂದು ಸಂಜೆ 5.00 ಗಂಟೆ ಸಮಯದಲ್ಲಿ ಅಡುಗೆ ಮಾಡುವ ವಿಚಾರದಲ್ಲಿ ಇಬ್ಬರೂ ಗಲಾಟೆ ಮಾಡಿಕೊಂಡಿದ್ದಾಗಿ ಆಗ ಚಾಸಾ.16 ಚೇತನ್ ರವರಿಗೆ ಅವರ ಗಲಾಟೆಯ ಶಬ್ದ ಕೇಳಿ ಬುದ್ದಿ ಹೇಳಿದ್ದಾಗಿ ತಿಳಿಯಿತು ಎಂದರೆ ಸರಿ. ದಿನಾಂಕ 18.11.2021 ರಂದು ಸಂಜೆ ಚಾಸಾ.16 ರವರು ನನ್ನ ಮಗ ಶೇಷಪ್ಪ ಮತ್ತು ಆರೋಪಿ ವಾಸವಿದ್ದ ಕೂಲಿ ಲೈನಿನ ಮನೆಯ ಬಳಿ ಹೋಗಿ ಇಬ್ಬರ ಹೆಸರನ್ನು ಕೂಗಿ ಕರೆದಿದ್ದಾಗಿ, ಆಗ ಯಾರುಾ ಮಾತನಾಡದೇ ಇದ್ದಾಗ ಕಿಟಕಿಯಿಂದ ಟಾರ್ಚ್ ಹಾಕಿ ನೋಡಿದಾಗ ನನ್ನ ಮಗನ ಕಾಲುಗಳು ಕಂಡು ಬಂದಿದ್ದಾಗಿ ಮತ್ತು ರಕ್ತ ಕಂಡು ಬಂದಿದ್ದಾಗಿ ನಂತರ ಆ ವಿಚಾರವನ್ನು ತೋಟದ ಮಾಲೀಕರಿಗೆ ತಿಳಿಸಿದ್ದಾಗಿ ನಂತರ ಆರೋಪಿಯನ್ನು ನೋಡಲಾಗಿ ಆತ ಎಸ್ಟೇಟಿನಲ್ಲಿ ಎಲ್ಲಿಯೂ ಕಂಡು ಬರದಿದ್ದಾಗಿ ತಿಳಿದು ಬಂತು ಎಂದರೆ ಸರಿ. ಆರೋಪಿ ಅಡುಗೆ ಮಾಡುವ ವಿಚಾರದಲ್ಲಿ ನನ್ನ ಮಗನೊಂದಿಗೆ ಜಗಳ ತೆಗೆದು ಕತ್ತಿಯಿಂದ ಆತನ ಕುತ್ತಿಗೆ, ಮುಖ, ಗಲ್ಲಕ್ಕೆ ಕಡಿದು ಚಾಕುವಿನಿಂದ ಹೊಟ್ಟೆಗೆ ಚುಚ್ಚಿ ಕೊಲೆ ಮಾಡಿದ್ದಾಗಿ ತಿಳಿದುಬಂತು ಎಂದರೆ ಸರಿ.

12. ದೂರು ನೀಡಿದ ಮಾರನೇ ದಿನ ಅಂದರೆ ದಿನಾಂಕ 20.11.2021 ರಂದು ನೀವು ಚಿಕ್ಕಮಗಳೂರು ಗ್ರಾಮಾಂತರ ಪೊಲೀಸ್ ಠಾಣೆಗೆ ಹೋಗಿದ್ದಿರಿ ಎಂದರೆ ಸರಿ. ಆ ದಿನ ಪೊಲೀಸರು

ದಸ್ತಗಿರಿ ಮಾಡಿದ ಆರೋಪಿಯನ್ನು ನಿಮಗೆ ತೋರಿಸಿದ್ದಾರೆ ಎಂದರೆ ಸರಿ. ಆ ಬಗ್ಗೆ ನೀವು ಪೊಲೀಸರಿಗೆ ಮುಂದುವರೆದ ಹೇಳಿಕೆಯನ್ನು ನೀಡಿದ್ದೀರಿ ಎಂದರೆ ಸರಿ.

ಪಾಟೀ ಸವಾಲುಃ

(ಈ ಹಂತದಲ್ಲಿ ನ್ಯಾಯಾಲಯದ ಬೆಳಗಿನ ಕಲಾಪದ ಅವಧಿ ಮುಗಿದಿದ್ದರಿಂದ ಸಾಕ್ಷಿಯ ಪಾಟೀ ಸವಾಲನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ವಿಶೇಷ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ದಿನಾಂಕಃ 04.07.2024 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಐ ಎಸ್ ಟಿ ವಕೀಲರಿಂದಃ ಆರೋಪಿ ಪರವಾಗಿ

13. ಕಬ್ಬಿನಹಳ್ಳಿ ಯಾವ ರಸ್ತೆಯಲ್ಲಿ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ಅಲ್ಲಿಗೆ ಹೋಗಿಲ್ಲ. ಚಾಸಾ.14 ರವರ ಎಸ್ಟೇಟಿನಲ್ಲಿ ಎಷ್ಟು ಕೂಲಿ ಲೈನಿನ ಮನೆಗಳಿವೆ ಮತ್ತು ಅಲ್ಲಿ ಎಷ್ಟು ಜನ ವಾಸಿಸುತ್ತಿದ್ದಾರೆ ಮತ್ತು ಅವರ ಹೆಸರೇನು ಎಂದು ನನಗೆ ಗೊತ್ತಿಲ್ಲ. ಪಟ್ಟಿ ಆಳುಗಳಿಗೆ ಮಾತ್ರ ಕೂಲಿ ಲೈನ್ ಮನೆಗಳನ್ನು ನೀಡಲಾಗುತ್ತದೆ ಎಂದರೆ ಸಾಕ್ಷಿ

ಅವರಿಗೂ ನೀಡುತ್ತಾರೆ ಮತ್ತು ತಾತ್ಕಾಲಿಕವಾಗಿ ಅಂದರೆ 16-20 ದಿನಗಳವರೆಗೆ ಕೆಲಸ ಮಾಡುವವರಿಗೂ ನೀಡಲಾಗುತ್ತದೆ ಎನ್ನುತ್ತಾರೆ. 16-20 ದಿನಗಳವರೆಗೆ ಕೆಲಸ ಮಾಡುವವರನ್ನು ಮೇಸ್ತ್ರಿಗಳು ಕಳುಹಿಸಿಕೊಡುತ್ತಾರೆ ಎಂದರೆ ಸರಿ. ನಿಮ್ಮ ಮಗ ಮೇಸ್ತ್ರಿ ಮೂಲಕ ಹೋಗಿದ್ದನೇ ಅಥವಾ ಪಟ್ಟಿಗೆ ಹೋಗಿದ್ದನೇ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಆರೋಪಿ ಕರೆದಿದ್ದರಿಂದ ಹೋಗಿದ್ದನು ಎನ್ನುತ್ತಾರೆ. ನನಗೆ ಆರೋಪಿ ಎಲ್ಲಿಯವನು ಏನು ಎಂದು ನನಗೆ ಪರಿಚಯವಿಲ್ಲ.

14. ಆರೋಪಿಯ ಹೆಸರು ಮನು ಎಂದು ನಿಮಗೆ ಯಾರು ಹೇಳಿದ್ದರು ಎಂದರೆ ಸಾಕ್ಷಿ ನನ್ನ ಮಗ ಫೋನ್ ಮಾಡಿದ್ದಾಗ ಹೇಳಿದ್ದನು ಆದರೆ ಆರೋಪಿಯೇ ಮನು ಎಂದು ಪೊಲೀಸರು ಠಾಣೆಯಲ್ಲಿ ತೋರಿಸಿದ್ದಾರೆ ಎನ್ನುತ್ತಾರೆ. ಕಬ್ಬಿನಹಳ್ಳಿ ಎಸ್ಟೇಟಿನ ಕೂಲಿ ಲೈನಿನ ಮನೆಯಲ್ಲಿ ಏನು ನಡೆದಿತ್ತು ಎಂದು ಪೊಲೀಸರು ಹೇಳಿದ ಮೇರೆಗೆ ನಿಮ್ಮ ಮುಖ್ಯ ವಿಚಾರಣೆಯಲ್ಲಿ ತಿಳಿಸಿದ್ದೀರಿ ಎಂದರೆ ಸರಿ. ಅದನ್ನು ಹೊರತುಪಡಿಸಿ ನಿಮಗೆ ಬೇರೆ ಯಾವುದೇ ವಿಷಯ ತಿಳಿದಿಲ್ಲ ಎಂದರೆ ಸರಿ. ಶೇಷಪ್ಪನ ಫೋನ್ ನಂಬರ್ ಏನು ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ.

15. ನನ್ನ ಎರಡನೇ ಮಗ ಸಹ ಮೂಡಿಗೆರೆಯಲ್ಲಿ ಕೊಲೆಯಾಗಿ ಮೃತಪಟ್ಟಿದ್ದನು. ಸದರಿ ಘಟನೆಯೂ ಸಹ ಇದೇ ಪ್ರಕರಣದ ಘಟನೆಯಂತೆ ಸಂಭವಿಸಿತ್ತು ಎಂದರೆ ಸರಿ. ಶೇಷಪ್ಪ ಯಾರೊಂದಿಗೆ ಸ್ನೇಹ ಬೆಳೆಸುತ್ತಿದ್ದನು ಮತ್ತು ಏನು ವ್ಯವಹಾರ ಮಾಡುತ್ತಿದ್ದನು ಎಂದು ನಿಮಗೆ ಗೊತ್ತಿಲ್ಲ ಎಂದರೆ ಸರಿ. ನಿಮ್ಮ ಫೋನ್ ನಂಬರನ್ನು ಚಾಸಾ.14 ರವರಿಗೆ ಯಾರು ಕೊಟ್ಟಿದ್ದರು ಎಂದರೆ ಸಾಕ್ಷಿ ಅವರ ಬಳಿ ಮೊದಲೇ ನನ್ನ ನಂಬರ್ ಇತ್ತು ಎನ್ನುತ್ತಾರೆ. ಚಾಸಾ.14 ರವರು ನನಗೆ ಫೋನ್ ಮಾಡಿ ನನ್ನ ಮಗನಿಗೆ ಹುಷಾರಿಲ್ಲ ಎಂದು ಹೇಳಿ

ಪೊಲೀಸ್ ಠಾಣೆಗೆ ಬರುವಂತೆ ತಿಳಿಸಿದ್ದರು. ನೀವು ಪೊಲೀಸ್ ಠಾಣೆಗೆ ಹೋದಾಗ ಕಬ್ಬಿನಹಳ್ಳಿಯವರು ಯಾರಾದರೂ ಇದ್ದರು ಎಂದರೆ ಸಾಕ್ಷಿ ಎಸ್ಟೇಟಿನ ಮಾಲೀಕರ ಮಗ ಇದ್ದನು ಎನ್ನುತ್ತಾರೆ. ಆಗ ಸದರಿ ಎಸ್ಟೇಟಿನ ಮಾಲೀಕರ ಮಗ ನನ್ನ ಮಗನಿಗೆ ಹುಷಾರಿಲ್ಲ ಒಮ್ಮೆ ಪ್ರಜ್ಞೆ ಬರುತ್ತದೆ ಮತ್ತೊಮ್ಮೆ ಹೋಗುತ್ತದೆ ಎಂದು ಹೇಳಿದ್ದನು. ನಾನು ಮೊದಲ ಹೆಬ್ಬೆಟ್ಟಿನ ಗುರುತನ್ನು ಆ ಸಮಯದಲ್ಲಿ ಪೊಲೀಸ್ ಠಾಣೆಯಲ್ಲಿ ಮಾಡಿದ್ದೇನೆ. ಆ ಸಮಯದಲ್ಲಿ ಒಟ್ಟು ಎಷ್ಟು ಹೆಬ್ಬೆಟ್ಟಿನ ಗುರುತನ್ನು ಹಾಕಿದ್ದೀರಿ ಎಂದರೆ ಸಾಕ್ಷಿ ನನಗೆ ಹುಷಾರಿಲ್ಲದ ಕಾರಣ ನೆನಪಿಲ್ಲ ಆದರೆ ಸುಮಾರು ಹೆಬ್ಬೆಟ್ಟಿನ ಗುರುತನ್ನು ಹಾಕಿದ್ದೆನು ಎನ್ನುತ್ತಾರೆ. ನಾನು ಹೆಬ್ಬೆಟ್ಟಿನ ಗುರುತನ್ನು ಹಾಕಿದ ದಾಖಲೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಇಂದಿಗೂ ಸಹ ಸದರಿ ದಾಖಲೆಗಳಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ, ಅದನ್ನು ಯಾರೂ ನನಗೆ ಓದಿ ಹೇಳಿಲ್ಲ. ನಾನು ಒಟ್ಟು 2 ಬಾರಿ ಪೊಲೀಸ್ ಠಾಣೆಗೆ ಹೋಗಿದ್ದೇನೆ, ಮೊದಲ ಬಾರಿ ದೂರು ನೀಡಲು ಹೋಗಿದ್ದೇನೆ, ಅದಾದ 15 ದಿನಗಳ ನಂತರ ಇನ್ನೊಂದು ಬಾರಿ ಹೋಗಿದ್ದೇನೆ. ಆ ರೀತಿ 15 ದಿನಗಳ ನಂತರ ನಾನು ಪೊಲೀಸ್ ಠಾಣೆಗೆ ಹೋದ ಸಂದರ್ಭದಲ್ಲಿ ಪೊಲೀಸರು ಬರವಣಿಗೆ ಮಾಡಿಕೊಂಡರು.

16. ಆ ರೀತಿ 2 ನೇ ಬಾರಿಗೆ ಪೊಲೀಸ್ ಠಾಣೆಗೆ ಹೋಗಿದ್ದಾಗ ಪೊಲೀಸರು ಆರೋಪಿಯನ್ನು ನನಗೆ ತೋರಿಸಿದ್ದರು. ಅದೇ ದಿನ ಮು.ಮಾ.8 ಮತ್ತು ಮು.ಮಾ.9 ಅನ್ನು ನನಗೆ ತೋರಿಸಿದ್ದರು. ಅವುಗಳನ್ನು ಆ ದಿನ ಪ್ಯಾಕ್ ಮಾಡಿ ಇಡಲಾಗಿತ್ತು, ನಂತರ ಪೊಲೀಸರು ಅವುಗಳನ್ನು ಸ್ವಲ್ಪ ತೆಗೆದು ನನಗೆ ತೋರಿಸಿದರು. ಆ

ಸಮಯದಲ್ಲಿ ಅವುಗಳ ಮೇಲೆ ನೆನಪಿಟ್ಟುಕೊಳ್ಳುವಂತಹ ಯಾವುದೇ ಗುರುತು ಇರಲಿಲ್ಲ.

17. ಮು.ಮಾ.8 ಮತ್ತು ಮು.ಮಾ.9 ಸಾಮಾನ್ಯವಾಗಿ ಎಲ್ಲರ ಮನೆ ಮತ್ತು ತೋಟಗಳಲ್ಲಿ ಇರುತ್ತವೆ ಎಂದರೆ ಸರಿ. ಅವುಗಳ ಮೇಲೆ ಯಾವುದೇ ನಿರ್ದಿಷ್ಟವಾದ ಗುರುತು ಇಲ್ಲದ ಹೊರತು ಅವು ನೀವು ನೋಡಿದ ಆಯುಧಗಳೇ ಎಂದು ತಿಳಿಸಲು ಸಾಧ್ಯವಾಗುವುದಿಲ್ಲ ಎಂದರೆ ಸರಿ. ನೀವು ಸಹ ಆಗಾಗ್ಗೆ ಬೇರೆ ಬೇರೆ ತೋಟಗಳಿಗೆ ಕೆಲಸಕ್ಕೆ ಹೋಗುತ್ತೀರಿ ಎಂದರೆ ಸರಿ. ನಾನು ಪಟ್ಟಿ ಆಳಾಗಿ ತೋಟಗಳಿಗೆ ಕೆಲಸಕ್ಕೆ ಹೋಗುತ್ತೇನೆ.

18. ನಿಮ್ಮ ಕುಟುಂಬದವರ ಮೇಲೆ ಯಾರೋ ದ್ವೇಷವನ್ನು ಸಾಧಿಸುತ್ತಿದ್ದು, ಅವರೇ ನಿಮ್ಮ ಇಬ್ಬರ ಮಕ್ಕಳನ್ನು ಸಾಯಿಸಿದ್ದಾರೆ ಎಂದರೆ ಸಾಕ್ಷಿ ನಮ್ಮ ಕುಟುಂಬದಲ್ಲಿ ಆ ರೀತಿಯವರು ಯಾರು ಇಲ್ಲ ಎನ್ನುತ್ತಾರೆ. ಆ ಕಾರಣಕ್ಕೆ ನೀವು ಒಂದೇ ಕಡೆ ನಿಲ್ಲದೇ ಬೇರೆ ಕಡೆ ತೋಟಗಳಿಗೆ ಕೆಲಸಕ್ಕೆ ಹೋಗುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಮಗನ ಕಾರಣಕ್ಕಾಗಿ ತೋಟ ಬದಲಾಯಿಸಿದ್ದೆನು ಆದರೆ ಒಂದೇ ತೋಟದಲ್ಲಿ 35 ವರ್ಷಗಳ ಕಾಲ ಕೆಲಸ ಮಾಡಿದ್ದೆನು ಎನ್ನುತ್ತಾರೆ.

19. ಶೇಷಪ್ಪ ಒಂದೇ ತೋಟದಲ್ಲಿ ಕೆಲಸ ಮಾಡುತ್ತಿರಲಿಲ್ಲ, ಆಗ್ಗಿಂದಾಗ್ಗೆ ತೋಟಗಳನ್ನು ಬದಲಿಸುತ್ತಿದ್ದನು ಎಂದರೆ ಸರಿ. ಶೇಷಪ್ಪ ಭಯದಿಂದಾಗಿ ಒಂದೇ ಕಡೆ ಕೆಲಸಕ್ಕೆ ಹೋಗುತ್ತಿರಲಿಲ್ಲ, ಸ್ಥಳಗಳನ್ನು ಬದಲಾಯಿಸುತ್ತಿದ್ದನು ಎಂದರೆ ಸಾಕ್ಷಿ ನನ್ನ ಚಿಕ್ಕ ಮಗ ಕೊಲೆಯಾಗಿದ್ದರಿಂದ ಶೇಷಪ್ಪನಿಗೂ ಸಹ ಭಯವಾಗಿ ಆತ ಒಂದೇ ಕಡೆ ನಿಲ್ಲುತ್ತಿರಲಿಲ್ಲ ಎನ್ನುತ್ತಾರೆ.

20. ಆರೋಪಿ ನಿಮ್ಮ ಸಂಬಂಧಿಕನಲ್ಲ ಮತ್ತು ನಿಮಗೆ ಪರಿಚಿತನಲ್ಲ ಎಂದರೆ ಸರಿ. ನಿಮ್ಮ ಮಗನ ಸಾವಿಗೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಪೊಲೀಸರು ಠಾಣೆಯಲ್ಲಿ ಆರೋಪಿಯನ್ನು ತೋರಿಸಿದ್ದಾಗಿ, ಆತನ ಫೋಟೋವನ್ನು ತೋರಿಸಿದ್ದಾಗಿ ಮತ್ತು ಮು.ಮಾ.8 ಮತ್ತು ಮು.ಮಾ.9 ಅನ್ನು ತೋರಿಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿ, ಮು.ಮಾ.8 ಮತ್ತು ಮು.ಮಾ.9 ಅನ್ನು ಇದೇ ಮೊದಲ ಬಾರಿಗೆ ನೀವು ನ್ಯಾಯಾಲಯದಲ್ಲಿ ನೋಡುತ್ತಿದ್ದೀರಿ ಎಂದರೆ ಸರಿಯಲ್ಲ.

21. ಪೊಲೀಸರು ಹೇಳಿಕೊಟ್ಟಂತೆ ನೀವು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಸಾಕ್ಷ್ಯ ನುಡಿದಿದ್ದೀರಿ ಎಂದರೆ ಸರಿಯಲ್ಲ. ನಿಮಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ